## ಮಕ್ಕಳ ಮನಸ್ಸೇಕೆ ಕದಡಿದೆ?




‘ಮಕ್ಕಳ ಮನಸ್ಸೇಕೆ ಕದಡಿದೆ?’ (ಎಂ. ಶ್ರೀಧರಮೂರ್ತಿ, ಜೂ. 30) ಲೇಖನ ಇಂದಿನ ಡಿಜಿಟಲ್ ಯುಗದ ಮೋಸದ ಜಾಲವನ್ನು, ಅಮಾನುಷತೆಯನ್ನು ತೆರೆದಿಟ್ಟಿದೆ. ಒಂದು ಮಗುವಿನ ತಂದೆಯಾದ ನನಗೆ ‘ಸುಧಾ’ ಈ ಲೇಖನದ ಮೂಲಕ ವಾರ್ನಿಂಗ್ ನೋಟೀಸ್ ಕೊಟ್ಟಂತಿದೆ. ನನ್ನ ಆತ್ಮೀಯ ಪೋಷಕರಿಗೆ ಈ ಲೇಖನವನ್ನು ತಲುಪಿಸುತ್ತೇನೆ.

—ಬಸವರಾಜು ದೇಸಿ, ಬೆಂಗಳೂರು

ಇಂದಿನ ಮಕ್ಕಳು ಬಾಲ್ಯದಿಂದ ವಂಚಿತರಾಗಿದ್ದಾರೆ. ಪೋಷಕರು ಅಸಹಾಯಕರಾಗಿದ್ದಾರೆ. ಕೊರೊನಾ ಸಮಯದ ಲಾಕ್‌ಡೌನ್ ಈ ಎಲ್ಲ ನಕಾರಾತ್ಮಕ ಬೆಳವಣಿಗೆಗಳಿಗೆ ಬಹುಪರಾಕ್ ಹೇಳಿದೆ.

—ಸುಶೀಲಾ ಬಿ. ಆರ್. ರಾಮಣ್ಣ, ಬೆಂಗಳೂರು

ಇಂದಿನ ಧಾವಂತದಲ್ಲಿ ಅಬಾಲವೃದ್ಧರಾದಿಯಾಗಿ ಮೊಬೈಲ್ ಎಂಬ ಮಾಯಾಮೃಗದ ಬೆನ್ನತ್ತಿದ್ದಾರೆ. ಸ್ವಾಭಾವಿಕ ವರ್ತನೆ, ಸಹಜ ಜೀವನದ ಆಸ್ವಾದನೆಯಿಂದ ದೂರಾಗಿ ಯಾಂತ್ರಿಕ ಬದುಕನ್ನು ಸವೆಸುತ್ತಿದ್ದಾರೆ. ಪ್ರಕೃತಿ ತಂತಾನೆ ಎಲ್ಲವನ್ನೂ ಸರಿಪಡಿಸಿಕೊಳ್ಳುವ ಶಕ್ತಿಯನ್ನು ಹೊಂದಿದೆ ಎಂಬುದು ಖಂಡಿತವಾಗಿ ಸತ್ಯ. ಕಾಲಾಯ ತಸ್ಮೈ ನಮಃ

—ವಿಜಯ್ ಮಂಜುನಾಥ್

### ಆಗಾಖಾನ್ ಅರಮನೆ

‘ಆಗಾಖಾನ್ ಅರಮನೆಯಲ್ಲಿ ಮಹಾತ್ಮನ ನೆರಳು’ (ಆರ್ಕೆ ಆಡುಕಳ, ಜೂ. 30) ಲೇಖನವು ಮನೋಜ್ಞವಾಗಿದೆ. ಸ್ವಾತಂತ್ರ್ಯ ಹೋರಾಟದೊಡನೆ ನಿಕಟ ನಂಟು ಬೆಳೆಸಿಕೊಂಡು ಬಂದು, ಕೊನೆಗೆ ಅರಮನೆಯನ್ನು ಗಾಂಧೀಜಿ ಸ್ಮಾರಕ ಸಮಿತಿಗೆ ಬಿಟ್ಟುಕೊಟ್ಟಿದ್ದು ತ್ಯಾಗದ ಸಂಕೇತವಾಗಿದೆ. ಆ ತ್ಯಾಗ ನಮಗೆ ಸ್ಫೂರ್ತಿಯಾಗಬೇಕು. ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನಗಳನ್ನು ನೆನಪಿಸುತ್ತ ಇದ್ದರೆ ಯಾವ ಭಾರತೀಯನಿಗೂ ಭ್ರಷ್ಟಾಚಾರ ಮತ್ತು ಖಜಾನೆಯ ಹಣದ ದುರುಪಯೋಗಕ್ಕೆ ಮನಸ್ಸಾಗದು.

—ಆದಂ ಹೇಂತಾರ್, ದಕ್ಷಿಣ ಕನ್ನಡ

1869ರಲ್ಲಿ, ಸುಲ್ತಾನ ಮೊಹಮ್ಮದ್ ಷಾ ಆಗಾಖಾನ್ 3, ಬರಗಾಲ ಪೀಡಿತ ಜನರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ದಿನಗೂಲಿ ಜನರನ್ನು ನೇಮಿಸಿ ಆಗಾಖಾನ್ ಅರಮನೆಯನ್ನು ಕಟ್ಟಿದರು ಎಂದು ಲೇಖನದಲ್ಲಿ ಉಲ್ಲೇಖಿತವಾಗಿದೆ. ಅಂದರೆ ಈಗಿನ ನರೇಗ ಯೋಜನೆ 1869ರಲ್ಲಿಯೇ ಚಾಲ್ತಿಯಲ್ಲಿ ಇತ್ತು ಎಂದಾಯ್ತು!

—ಎನ್. ನರಸಿಂಹ ರಾವ್, ಬೆಂಗಳೂರು

### ಪುತ್ತೂರಿನಲ್ಲೊಂದು ಗುಹಾಲಯ!

‘ಪುತ್ತೂರಿನಲ್ಲೊಂದು ಗುಹಾಲಯ’ (ನಿರಂಜನ ವಾನಳ್ಳಿ, ಜೂ.30) ಲೇಖನ ಅದ್ಭುತವಾಗಿದೆ. ನಂಬಲು ಸಾಧ್ಯವಾಗುತ್ತಿಲ್ಲ. ಪರಿಸರ ಸಂರಕ್ಷಣೆಗೆ ಒಳ್ಳೆಯ ಕೊಡುಗೆ.

—ಕೆ. ಗಣೇಶ ರಾಜ್, ಬೆಂಗಳೂರು

### ಕಂದನ ಕೊಂದದ್ದು...

‘ಕಂದನ ಕೊಂದದ್ದು ಗುಂಡುಗಳು ಮಾತ್ರವೇ?’ (ಕಾವ್ಯಾ ಕಡಮೆ, ಜೂ. 30) ಲೇಖನ ಓದಿದೆ. ಬಂದೂಕು ಸಂಸ್ಕೃತಿಯಿಂದ ಆಗುವ ಅನಾಹುತಗಳು, ಅದಕ್ಕೆ ಇರುವ ಪರಿಹಾರಗಳ ಕುರಿತು, ರಾಜಕೀಯ, ಕಾನೂನುಗಳ ಕುರಿತು ಅರ್ಥಪೂರ್ಣವಾಗಿ ಬರೆದಿದ್ದಾರೆ.

—ರವೀಂದ್ರ ಈಶ್ವರಪ್ಪ, ಜಡ್ರಾಮಕುಂಟಿ

### ಸಾವೆಂಬ ಬಯಲು

‘ಸಾವೆಂಬ ಬಯಲು’ (ಪದ್ಮಿನಿ ನಾಗರಾಜು, ಜೂ.30) ಕಥೆ ಸಹಜ, ಸುಂದರವಾಗಿದೆ. ಸಾವಿನ ಕಥೆಯಾದರೂ ಹಳ್ಳಿಯಲ್ಲಿ ನಡೆಯುವ ವಿದ್ಯಮಾನವನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ.

—ಕಾಂತರಾಜ್, ಗಂಡಸಿ

ಊರಿನಲ್ಲಿ ಸಾವಿನ ದಿನ ನಡೆಯುವ ವಿದ್ಯಮಾನಗಳು ಚೆನ್ನಾಗಿ ಮೂಡಿಬಂದಿದೆ. ಸರಳ ನಿರೂಪಣೆ ಕಥೆಯನ್ನು ಓದಲು ಪ್ರಚೋದಿಸುವುದಲ್ಲದೆ, ಪಾತ್ರಗಳು ನಮ್ಮೊಂದಿಗೆ ಇರುವಂತೆ ಅನ್ನಿಸುತ್ತದೆ. ಅತ್ಯುತ್ತಮ ಚಿತ್ರ ರಚಿಸಿದ ಸಂತೋಷ್ ಸಸಿಹಿತ್ಲು ಅವರಿಗೂ ವಂದನೆಗಳು.

—ಎಂ.ವಿ.ಶಿವರಾಂ, ಹಾಸನ

## ಯಾವುದು ಭಾಷೆ?

‘ಯಾವುದು ಭಾಷೆ? ಮಾತೋ, ಬರಹವೋ?’ (ಡಾ. ಡಿ.ಎನ್. ಶಂಕರ ಭಟ್, ಜೂ. 30) ಲೇಖನದ ಶೀರ್ಷಿಕೆಯೂ ಸೇರಿದಂತೆ, ಇಡೀ ಲೇಖನವು ನನ್ನಲ್ಲಿ ಒಂದಷ್ಟು ಪ್ರಶ್ನೆಗಳನ್ನು ಹುಟ್ಟುಹಾಕಿದೆ. 1. ಒಂದು ಭಾಷೆಗೆ ಆಲಿಸು(Listen), ಮಾತನಾಡು(Speak), ಓದು(Read), ಮತ್ತು ಬರೆ(Write) ಎಂಬ ನಾಲ್ಕು ಅವಯವಗಳು ಅನಿವಾರ್ಯ ಎಂದು ಓದಿಕೊಂಡಿರುವ ನನಗೆ ಈ ಶೀರ್ಷಿಕೆಯಲ್ಲಿನ ಪ್ರಶ್ನೆಯೇ ಅಸಂಗತವಾಗಿ ಕಂಡಿತು! ಮಾತಿಲ್ಲದೆ ಬರಹ, ಬರಹದ ಸಮರ್ಥನೆಯಿಲ್ಲದೆ ಮಾತು ಹೇಗೆ ಅರ್ಥಪೂರ್ಣವಾದೀತು? 2. ಮಾತು ಹಳೆಯದು, ಬರಹ ಇತ್ತೀಚಿನದು ಎಂದಾಕ್ಷಣಕ್ಕೆ ಬರಹ ಭಾಷೆಯಲ್ಲ ಎನ್ನಬಹುದೆ? ಹಾಗೆಂದುಕೊಂಡರೆ, ‘ಇಂತಿಂಥ ಕೃತಿಬರಹಗಳು ಇಂತಿಂಥ ಭಾಷೆಯಲ್ಲಿ ಇವೆ’ – ಎಂಬ ನಮ್ಮ ಸಾಮಾನ್ಯ ವ್ಯವಹಾರದ ಅಡಿಪಾಯವೇ ಅಲ್ಲಾಡುವುದಿಲ್ಲವೇ? 3. ಯಾವುದೇ ಆರೋಗ್ಯವಂತ ಮಗುವಿಗೆ ಮಾತನ್ನು ಕಲಿಯಲು ಯಾರ ನೆರವೂ ಬೇಕಿಲ್ಲ; ಬರಹಕ್ಕೆ ಮಾತ್ರ ಬೇಕು ಎಂಬುದು ನಿಜವೇ? ಹುಟ್ಟಿನಿಂದ ಶ್ರವಣ/ದೃಷ್ಟಿದೋಷ ಇರುವ ಮಕ್ಕಳು ಮಾತು ಕಲಿಯಲಾಗದೆ ಕಷ್ಟ ಪಡುವುದಿಲ್ಲವೆ? 4. ಮಾತಿಗೂ ಪಳೆಯುಳಿಕೆಗಳು ಧ್ವನಿ ಮುದ್ರಿತವಾಗಿ ಇದ್ದು ಮುಂದೊಂದು ದಿನ 2021ನೇ ಶತಮಾನದ ‘ಉಲಿ’ಗಳು ಸಾಕ್ಷಿಯಾಗಲಾರವೆ? 5. ಸಂಸ್ಕೃತವು ಬರಹ ಮಾತ್ರ; ಭಾಷೆಯಲ್ಲ ಎನ್ನಲು ಅದರಲ್ಲಿ ಬದಲಾವಣೆ ಆಗದಿರುವುದು ಹೇಗೆ ಆಧಾರವಾಗುತ್ತದೆ? ಸಂಸ್ಕೃತ ವ್ಯಾಕರಣದ ಬದ್ಧತೆಯನ್ನು ಮತ್ತು ಅದರಲ್ಲಿನ ಸರಳತೆಯ ಸೌಕರ್ಯಗಳನ್ನೂ ಬಳಸಿಕೊಂಡು, ಎರಡು ಸಾವಿರ ವರ್ಷಗಳ ಹಿಂದೆಯಲ್ಲ, ಈಗಲೂ ದೇಶದಾದ್ಯಂತ ಸಂಸ್ಕೃತದಲ್ಲೇ ಮಾತನಾಡುವ ಜನ, ಗ್ರಾಮಗಳು, ಸಮುದಾಯಗಳು ಸ್ವತಃ ಸಂಸ್ಕೃತ ವಿದ್ವಾಂಸರೂ ಆದ ಡಾ. ಶಂಕರ ಭಟ್ಟರ ನೆನಪಿಗೆ ಬರಲಿಲ್ಲವೇ? 6. ಮಾತು ಮಾತ್ರವೇ ಭಾಷೆ; ಬರಹ ಅಲ್ಲ ಎಂಬುದು ‘ಜಿಜ್ಞಾಸೆ’ಯೋ? ಅಥವಾ ಚರ್ಚೆಗೆ ಅವಕಾಶವಿಲ್ಲದ ‘ಸಿದ್ಧಾಂತ’ವೋ?

—ಲಕ್ಷ್ಮೀನಾರಾಯಣ ಭಟ್ಟ ಎಚ್. ಆರ್., ಮಂಗಳೂರು

ಲೇಖನ, ಭಾಷೆ ಅಂದರೆ ಏನು ಅನ್ನುವುದನ್ನು ಯಾವುದೇ ಗೊಂದಲಕ್ಕೆ ಎಡೆ ಇಲ್ಲದಂತೆ ಸ್ಪಷ್ಟವಾಗಿ ನಿರೂಪಿಸಿದೆ. ವಿದ್ಯಾವಂತರಲ್ಲೂ ಇರಬಹುದಾದ ತಪ್ಪು ತಿಳಿವಳಿಕೆಯನ್ನು ನಿವಾರಿಸಿದೆ. ಭಾಷೆಗಳ ಬಗ್ಗೆ ಕಾಳಜಿ ಇರುವ ಎಲ್ಲರಿಗೂ ಉಪಯುಕ್ತವಾದ ಅವರ ಬರಹಕ್ಕಾಗಿ ಧನ್ಯವಾದಗಳು.

—ಕುಚ್ಚಣ್ಣ ಶ್ರೀನಿವಾಸನ್

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in